ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯದಲ್ಲಿ,
ನ.ರಾ.ಪುರ.
<u>ಸಿ.ಸಿ. ನಂ ಃ**89/2025**</u>

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಸತೀಶ್ | ಸಿ.ಡಬ್ಲ್ಯೂ - 08 |
| ತಂದೆಯ ಹೆಸರು | ಃ | ರಾಮಕೃಷ್ಣ | ಪಿ.ಡಬ್ಲ್ಯೂ - 05 |
| ವಯಸ್ಸು | ಃ | 48 ವರ್ಷ | |
| ಉದ್ಯೋಗ | ಃ | ವ್ಯಾಪಾರ | |
| ವಾಸಸ್ಥಳ | ಃ | ಸೌತಿಕೆರೆ ಎನ್ ಆರ್ ಪುರ | |

ದಿನಾಂಕಃ **26/05/2026** ರಂದು ಪ್ರಮಾಣವಚನ ಬೋಧಿಸಲಾಯಿತು.
<u>ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ಯವರಿಂದ ಃಃ</u>

1. ಚಾಸಾ-6 ರವರ ಪರಿಚಯ ಇರುತ್ತದೆ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಯಾವುದೇ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ.

(ಈ ಹಂತದಲ್ಲಿ ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

<u>ಃಪಾಟೀ ಸವಾಲು ಸಹಾಯಕ ಸರ್ಕಾರಿ ಅಭಿಯೋಜಕರಿಂದ ಃ</u>

1. ದಿಃ 03-07-2025 ರಂದು ನಾನು ಘಟನೆಗೆ ಸಂಬಂಧಿಸಿದಂತೆ ದಿಃ22.06.2025 ರಂದು ಮದ್ಯಾಹ್ನ 3.15 ಗಂಟೆಗೆ ಚಾಸಾ-6 ರವರು ನನಗೆ ಫೋನ್ ಮಾಡಿ ಕೊಪ್ಪ ಕಡೆಯಿಂದ ನ.ರಾ. ಪುರ ಕಡೆಗೆ ಹೋಗುವ ಟಾರ್ ರಸ್ತೆಯ ಎಡ ಬದಿಯಲ್ಲಿ ಕನ್ಯಾಕುಮಾರಿ ಹೋಟೆಲ್ ಕಾಂಪ್ಲೆಕ್ಸ್ ಮುಂಭಾಗ ತಮ್ಮ ಬಾಬ್ತು ಹೋಮಿನಿ ಕಾರ್ ಸಂಖ್ಯೆ ಕೆ ಎ 14 ಎನ್ 3381 ಅನ್ನು ನಿಲ್ಲಿಸಿಕೊಂಡಿದ್ದು ಆ ವೇಳೆಗೆ ಶಿಂಸೆ ಕಡೆಯಿಂದ ಬಂದ ಬೋಲೆರೊ ಪಿಕ್ ಅಪ್ ವಾಹನ ಸಂಖ್ಯೆ ಕೆ ಎ 14 ಸಿ 7379 ಚಾಲಕನು ತಮ್ಮ ಕಾರಿನ ಹಿಂಬದಿಗೆ ಡಿಕ್ಕಿ ಹೊಡೆಸಿ ನಿಲ್ಲಿಸದೇ ಓಡಿ ಹೋಗಿದ್ದನು ಎಂದು ನನಗೆ ತಿಳಿಸಿದರು ಎಂದರೆ ಸರಿಯಲ್ಲ. ನಂತರ ಸದರಿಯವರು ನನಗೆ ಬೋಲೆರೂ ಪಿಕ್ ಅಪ್ ಹಿಂಬದಿಯಲ್ಲಿ ಕುರುಬನ ರಾಣಿಯೆಂದು ಬರೆದಿದ್ದು, ಸದರಿ ವಾಹನವನ್ನು ನಿಲ್ಲಿಸುವಂತೆ ಚಾಸಾ-6 ರವರು ಚಾಸಾ -1 ರವರಿಗೆ ಫೋನ್ ಮುಖಾಂತರ ತಿಳಿಸಿರುತ್ತಾರೆ ಎಂದರೆ

ಸರಿಯಲ್ಲ. ನಂತರ ಚಾಸಾ-1 ರವರು ಸದರಿ ವಾಹನದ ಚಾಲಕ ಮತ್ತು ಆತನ ಜೊತೆಗಿದ್ದವರು ಮುತ್ತಿನಕೊಪ್ಪದ ಪಜೇರೋ ಹೋಟೆಲ್ ಬಳಿ ವಾಹನ ನಿಲ್ಲಿಸಿದ್ದು, ಸದರಿಯವರು ಚಾಸಾ-1 ರವರನ್ನು ಆಕ್ರಮವಾಗಿ ಕರೆದುಕೊಂಡು ಹೋಗಿ ಭದ್ರಾವತಿ ಖಾರೇಹಳ್ಳಿ ಬ್ರಿಡ್ಜ್ ಬಳಿ ಹಲ್ಲೆ ಮಾಡಿರುವ ಬಗ್ಗೆ ದೂರು ದಾಖಲಾಗಿದ್ದು ಎಂದರೆ ಸರಿಯಲ್ಲ. ಆ ಸಂಬಂಧ ನಾನು ಈಗ ಓದಿ ಹೇಳಿದ ನಿಪಿ-13 ರಂತೆ ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ನಿಪಿ-13 ರಂತೆ ಹೇಳಿಕೆಯನ್ನು ಕೊಟ್ಟಿದ್ದರೂ ಸಹ ಆರೋಪಿತರಿಗೂ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ-</u> ಆರೋಪಿ ಪರ ಶ್ರೀ ಕೆ ಎಸ್ ಕೆ ವಕೀಲರು ತಮ್ಮ ಪರ ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-xx

ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ.

ಸಾಕ್ಷಿದಾರರ ಸಹಿಃ